International Journal of Kannada Research 2015; 1(1): 16-18




International Journal of Kannada Research
www.kannadajournal.com

**ISSN: 2454–5813**
IJSR 2015; 1(1): 16-18
© 2015 IJKS
www.kannadajournal.com
Received: 21-06-2015
Accepted: 23-07-2015

**Neelambika Policepatil**
Principal & Research Guide,
Godutai Doddappa Appa Degree College for Women, S.B. Temple Road, Brahampur, Kalaburagi, Karnataka-585103.

**Correspondence**
**Dr.(Mrs.)Neelambika Policepatil(Sherikar)**
Principal & Research Guide,
Godutai Doddappa Appa Degree College for Women, S.B. Temple Road, Brahampur, Kalaburagi, Karnataka-585103.

# ಕರ್ನಾಟಕದ ಸಾಂಸ್ಕೃತಿಕ ನೆಲೆ ಬಸವಕಲ್ಯಾಣ

**Dr. (Mrs.)Neelambika Policepatil (Sherikar).**

ಬಸವಕಲ್ಯಾಣವು ಇಡೀ ಕನ್ನಡಿಗರ ಅಭಿಮಾನದ ನೆಲೆ. ಮೈ ಮನಗಳಲ್ಲಿ ರೋಮಾಂಚನವನ್ನುಂಟುಮಾಡುವ ಅದ್ಭುತ ಶಕ್ತಿಯಿದೆ ಈ ಹೆಸರಿನಲ್ಲಿ. ಈ ಹೆಸರುಗಳು ಕಿವಿಗೆ ಬಿದ್ದ ತಕ್ಷಣ ಮನಸು ಮೌನಗೊಳ್ಳುತ್ತದೆ, ತಲೆ ತನ್ನಷ್ಟಕ್ಕೆ ತಾನೇ ಬಾಗುತ್ತದೆ. ಕಲ್ಯಾಣದ ಶಕ್ತಿಯಾದ ಬಸವಾದಿ ಶಿವಶರಣರ ನೆನಪಿನೊಂದಿಗೆ ಆತ್ಮಾಭಿಮಾನ ಉಂಟಾಗುತ್ತದೆ. ಜಗತ್ತಿನ ಐತಿಹಾಸಿಕ ನಗರಿಗಳಿಗಿಂತಲೂ ಇದು ಭಿನ್ನವಾಗಿ ನಿಲ್ಲುತ್ತದೆ. ಈ ನಾಡಿನ ಐತಿಹಾಸಿಕ ವಿವರಣೆಯಲ್ಲಿ ಕೇವಲ ಆಳರಸರು ಮಾತ್ರ ಬರುವದಿಲ್ಲ. ಕಲ್ಲು ಒಡೆಯುವ, ಕಟ್ಟಿಗೆ ಕಡೆಯುವ, ಕಸ ಹೊಡೆಯುವ, ಬಟ್ಟೆ ಒಗೆಯುವ, ದೋಣಿ ನಡೆಸುವ, ದನ ಕಾಯುವ, ಮೀನು ಹಿಡಿಯುವ, ಕೋತಿ ಕುಣಿಸುವ, ಚಪ್ಪಲಿ ಹೊಲಿಯುವವ, ಹುಲ್ಲು ಮಾರುವವ, ಹಗ್ಗ ಹೊಸೆಯುವವ, ಕಿನ್ನರಿ ಬಾರಿಸುವವ, ಬಹುರೂಪದವ, ಮನೆಯ ಬಾಗಿಲು ಕಾಯುವ, ಹೂ ಪತ್ತರಿ ಆಯುವ, ಮುಂತಾದ ಕಾಯಕ ಜೀವಿಗಳ ಚರಿತ್ರೆಯಲ್ಲಾ ಈ ಊರಿನ ಚರಿತ್ರೆಯಲ್ಲಿ ಸೇರಿಕೊಂಡು ಕಲ್ಯಾಣದ ಚರಿತ್ರೆ ವಿಶಿಷ್ಟವಾಗಿದೆ. ಬೇರೆ ಐತಿಹಾಸಿಕ ನಗರಗಳಿರುವಂತೆ ಭವ್ಯವಾದ ಕೋಟೆ ಕೊತ್ತಲುಗಳು, ದೇವಾಲಯಗಳು, ಮನಮೋಹಕವಾದ ಶಿಲ್ಪಗಳು ಮಾತ್ರವಲ್ಲದೆ ಇಲ್ಲಿ ಆಗಿ ಹೋದ ಒಬ್ಬೊಬ್ಬರ ಜೀವನವು ಅದ್ಭುತವಾಗಿದೆ.

'ನಭೂತೋ ನಭವಿಷ್ಯತ್' ಎನ್ನುವಂತಿದೆ ಇದರ ಐತಿಹಾಸಿಕ ವಿವರಣೆ. ವರ್ಗ ಸಮಾನತೆ, ವರ್ಣಸಮಾನತೆ, ಮತ್ತು ಲಿಂಗ ಸಮಾನತೆಯ ಸಮಾಜ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದ ನೆಲವಿದು. ವಿಚಾರ ಮತ್ತು ಆಚಾರಗಳ ಸಮನ್ವಯ ಸ್ವಾತಂತ್ರ್ಯವನ್ನು ಕಾಯಕದ ಕಟ್ಟಳೆಯಲ್ಲಿ ಸುಭದ್ರಗೊಳಿಸಿದ ಸ್ಥಳವಿದು. ಸ್ವಾರ್ಥವನ್ನು ದಮನಗೊಳಿಸಿ ನಿಸ್ವಾರ್ಥವನ್ನು ದಾಸೋಹ ಪರಿಕಲ್ಪನೆಯಲ್ಲಿ ಕಟ್ಟಿಕೊಟ್ಟ ಅಸಂಖ್ಯಾತ ದಾಸೋಹಿಗಳು ಬಾಳಿದಂತ ಪ್ರದೇಶವಿದು. ಮಾನವೀಯ ಮೌಲ್ಯವನ್ನು ಮೇಲಕ್ಕೆತ್ತಿ ಸಕಲ ಜೀವಿಗಳ ಲೇಸನ್ನೇ ಬಯಸಿ ವಿಶ್ವಮಾನ್ಯ ಧರ್ಮಕಟ್ಟಿದ ನೆಲವಿದು.
ಕನ್ನಡ ನಾಡಿನ ಪ್ರಮುಖ ಅರಸುಮನೆತನಗಳಿಗೆ ರಾಜಧಾನಿಯಾಗುವದಕಿಂತಲೂ ಮೊದಲು ಈ ನೆಲದಲ್ಲಿ ಅನೇಕ ತಪಸ್ವಿಗಳು ನೆಲಸಿದ್ದರೆಂಬ ನಂಬಿಕೆಯಿದೆ. ಈ ಭಾಗದಲ್ಲಿ ಕಲ್ಯಾಣಿ ಎನ್ನುವ ಋಷಿ ಪತ್ನಿ ತುಂಬಾ ಪ್ರಭಾವಿಯಾಗಿದ್ದಳೆಂದು ಅವಳಿಗೆ ಒಂಭತ್ತು ಗಂಡು ಮಕ್ಕಳು ಹುಟ್ಟಲು ಅವರೆಲ್ಲರೂ ತಪಸ್ವಿಗಳಾಗಿ ಭಾರತದ ಉದ್ದಗಲಕ್ಕೂ ಸಂಚರಿಸಿದ್ದರೆಂದು ಆ ತಪಸ್ವಿನಿಯ ಹೆಸರೇ ಈ ನಾಡಿಗೆ ಉಳಿಯುತ್ತೆಂದು ಈ ಭಾಗದಲ್ಲಿ ಸಿಕ್ಕ ಜನಪದ ಭುಲಾಯಿ ಹಾಡಿನಿಂದ ತಿಳಿಬರುತ್ತದೆ.

ಇತ್ತೀಚಿನ ಸಂಶೋಧನೆಯ ಪ್ರಕಾರ ಕಲ್ಯಾಣದ ಚರಿತ್ರೆ ೮ನೇ ಶತಮಾನದಿಂದಲೇ ಪ್ರಾರಂಭವಾಗುತ್ತದೆ. ಕಲ್ಯಾಣದ ಸಮೀಪದಲ್ಲಿರುವ ಮೋರ್ಖಂಡಿ ರಾಷ್ಟ್ರಕೂಟರಿಗೆ ರಾಜಧಾನಿಯಾಗಿತ್ತು. ಆಗ ಅದರ ಹೆಸರು ಮಯೂರ ಖಂಡಿ. ನಂತರದಲ್ಲಿ ಆಳಿದ ಚಾಲುಕ್ಯರಂತೂ ಕಲ್ಯಾಣಿ ಚಾಲುಕ್ಯರೆಂದೆ ಇತಿಹಾಸ ಪ್ರಸಿದ್ಧರಾಗಿದ್ದಾರೆ. ಆ ಮನೆತನದ ಅಯ್ಯಣ್ಣ ದ್ವಿತೀಯನು ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಚಾಲುಕ್ಯರ ಪ್ರಥಮ ಅರಸ. ಕಲ್ಯಾಣ ಚಾಲುಕ್ಯ ಅರಸರ ಕಾಲದಲ್ಲಿ ಕಲ್ಯಾಣವು ಅತಿ ವೈಭವದಿಂದ ಕೂಡಿದ ರಾಜಧಾನಿಯಾಗಿತ್ತು ಅಂತೆಯೆ ಕಲ್ಯಾಣ ಚಕ್ರವರ್ತಿ ಆರನೇಯ ವಿಕ್ರಮಾದಿತ್ಯನ ಆಸ್ಥಾನದ ಕವಿ ವಿಜ್ಞಾನೇಶ್ವರ ತನ್ನ ಕೃತಿ 'ಮಿತಾಕ್ಷರ'ದಲ್ಲಿ' ಹೀಗೆ ಉದ್ಗಾರ ತೆಗೆಯುತ್ತಾನೆ.

**'ನಾಸ್ತಿ ದಸ್ತಿ ಭವಿಷ್ಯತಿ ಕ್ಷಿತಿತಲೆ ಕಲ್ಯಾಣ ಕಲ್ಪಪುರಂನೋದೃಷ್ಟಃ**
**ಶೃತಏವ ವಾಕ್ಷಿತಿಪತಿಃ ಶ್ರೀ ವಿಕ್ರಮಾರ್ಕೋಪಮಃ'**

"ಭೂಮಿಯ ಮೇಲೆ ಕಲ್ಯಾಣದಂತಹ ಪಟ್ಟಣ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆ ಇರುವದಿಲ್ಲ, ವಿಕ್ರಮಾದಿತ್ಯನಂತಹ ಅರಸ ಎಂದೆಂದಿಗೂ ಹುಟ್ಟುವದಿಲ್ಲ" ಕವಿಯ ಈ ಮಾತು ಅತಿಶಯೋಕ್ತಿಯಿಂದ ಕೂಡಿದ್ದಲ್ಲ. ಆ ಕಾಲದ ಸಾವಿರಾರು ಶಾಸನಗಳು ಈ ಮಾತಿಗೆ ನಿದರ್ಶನವಾಗಿವೆ. ಇಂತಹ ವೈಭವಾತೀತವಾದ ಆಡಳಿತದೊಂದಿಗೆ ಕಲೆ ಮತ್ತು ಸಾಹಿತ್ಯವನ್ನೂ ಕೂಡಾ ಅವರು ಅಷ್ಟೇ ಉಚ್ಚ ಮಟ್ಟದಲ್ಲಿ ಬೆಳೆಸಿದರು. ಎಲ್ಲಿಯೂ ಆಶ್ರಯ ದೊರೆಯದ ಕಾಶ್ಮೀರದ ಬಿಲ್ಹಣನಂತಹ ಕವಿಗಳು ಕಲ್ಯಾಣದ ಚಾಲುಕ್ಯರಲ್ಲಿ ಆಶ್ರಯ ಪಡೆದಿದ್ದಾರೆ.
ಚಾಲುಕ್ಯರ ತರುವಾಯ ಕಲ್ಯಾಣವು ಕಳಚೂರಿಯರಿಗೆ ರಾಜಧಾನಿಯಾಯಿತು. ಅವರ ಕಾಲವು

ಕೇವಲ ಕಲ್ಯಾಣದ ಇತಿಹಾಸದಲ್ಲಿ ಮಾತ್ರವಲ್ಲ ಕರ್ನಾಟಕದ ಇತಿಹಾಸದಲ್ಲಿಯೇ ಸುವರ್ಣ ಅಕ್ಷರಗಳಿಂದ ಬರೆದಿಡುವಂತಹದು. ಅದಕ್ಕೆ ಕಾರಣ ಮಹಾ ಮಾನವತಾವಾದಿ ಸಮಾನತೆಯ ಹರಿಕಾರ, ಕಾಯಕ ವೀರ, ಭಕ್ತಿ ಭಾಂಡಾರಿ ಬಸವಣ್ಣನವರು ಕಲ್ಯಾಣದ ಕಳಚೂರಿ ವಂಶಕ್ಕೆ ಪ್ರಧಾನಿಯಾಗಿ ಬಂದದ್ದು.

ಬಸವಣ್ಣನವರಿಂದಾಗಿ ಕಲ್ಯಾಣವು ಅಂದಿನಿಂದ ಇಂದಿನವರೆಗೂ ಪ್ರಸಿದ್ಧಿ ಪಡೆದುಕೊಂಡಿದೆ. ಅವರ ಕಾಲದಲ್ಲಿ ಅಂದರೆ ೧೨ನೇ ಶತಮಾನದಲ್ಲಿ ಜಗತ್ತಿನ ಯಾವ ನೆಲದಲ್ಲಿಯೂ ನಡೆಯಲಾರದ ಬದಲಾವಣೆಗಳು ಕಲ್ಯಾಣದಲ್ಲಿ ನಡೆದವು. ದೇಶದ ಎಲ್ಲಾ ಜಾತಿಯ ಜನರನ್ನು ಒಂದುಗೂಡಿಸಿ ಒಂದೆ ಸ್ಥಳದಲ್ಲಿ ಒಂದೇ ವೇದಿಕೆಯ ಮೇಲೆ ಸಮಾನತೆಯ ಆಧಾರದಮೇಲೆ ಒಂದುಗೂಡಿಸಿ ಸಮತಾವಾದದ ತತ್ವದ ಸಿದ್ಧಾಂತವನ್ನು ನಿರೂಪಣೆಮಾಡಿ ಮಾನವನ ಸೇವೆಗಾಗಿ ಒದಗಿಬಂದ ಅವಕಾಶವನ್ನು ಸದುಪಯೋಗ ಪಡಿಸಿಕೊಂಡರು ಬಸವಣ್ಣನವರು. ಬಡವರ, ದಲಿತರ, ಸ್ತ್ರೀಯರ ಮೇಲಿನ ಶೋಷಣೆಯನ್ನು ನಿಲ್ಲಿಸಿ ಅವರೆಲ್ಲರನ್ನು ಮೇಲಕ್ಕೆತ್ತಲು ಕಲ್ಯಾಣವನ್ನು ತಮ್ಮ ಪ್ರಾಯೋಗಿಕ ಕೇಂದ್ರವನ್ನಾಗಿ ಮಾಡಿಕೊಂಡರು. ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕಾಯಕ ತತ್ವವನ್ನು ಗಟ್ಟಿಗೊಳಿಸಿದರು. ಕಾಯಕವೇ ಕೈಲಾಸವೆಂದು ಹೇಳಿ ಜನಸಾಮಾನ್ಯರನ್ನು ಕಲ್ಯಾಣದಲ್ಲಿ ಕಾಯಕದಲ್ಲಿ ತೊಡಗಿಸಿದರು. ಹೀಗಾಗಿ ಅಂದು ಕಲ್ಯಾಣದಲ್ಲಿ ಬಡತನ ನಿವಾರಣೆಗೊಂಡಿತ್ತು, ಸಿರಿತನ ನಿಗ್ರಹವಾಯಿತು, ಸಂಪ್ರದಾಯಬದ್ಧ ಮತಗಳ ಕರ್ಮಸಿದ್ಧಾಂತಗಳು ಗಾಳಿಗೆ ತೂರಿದವು, ಮೇಲು ಕೀಳೆಂಬ ಭಾವನೆ ಕಿತ್ತೊಗೆಯಲಾಯಿತು.

ಅಂದು ಬಸವಣ್ಣನವರ ಮನೆ ಮಹಾಮನೆಯೆಂದು ಪ್ರಸಿದ್ಧಿಗೊಂಡು ಅನೇಕ ನಿರಾಶ್ರಿತ ಜನರಿಗೆ ಆಶ್ರಯ ತಾಣವಾಯಿತು. ತ್ರಿಪುರಾಂತ ಕೆರೆಯಮೇಲೆ ಸ್ಥಾಪಿಸಿದ ಮಂಟಪ ಅನುಭವ ಮಂಟಪವೆಂದು ಪ್ರಖ್ಯಾತಗೊಂಡಿತು. ಇದು ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಸ್ಥಾಪಿಸಲ್ಪಟ್ಟ ಪ್ರಪ್ರಥಮ, ಅದ್ವಿತೀಯ ಕನ್ನಡ ವಿಶ್ವವಿದ್ಯಾಲಯ. ಇಲ್ಲಿರುವ ಶೂನ್ಯ ಸಿಂಹಾಸನಕ್ಕೆ ಶೂದ್ರಕುಲದಲ್ಲಿ ಜನಿಸಿದ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಅಧ್ಯಕ್ಷರನ್ನಾಗಿ ಮಾಡಿ ಬಸವಣ್ಣನವರು ಸಮಾಜದ ಕಣ್ಣು ತೆರೆಸಿದರು. ಈ ಮಂಟಪದಲ್ಲಿ ೨೨೦ ಅಮರಗಣಂಗಳು, ಲಕ್ಷದಮೇಲೆ ತೊಂಬತ್ತಾರು ಸಾವಿರ ಜಂಗಮರು, ೩೦೦ಜನ ವಚನಕಾರರು, ೩೩ ಜನ ವಚನಗಾರ್ತಿಯರು, ಸದಸ್ಯರಾಗಿದ್ದು, ಇವರೆಲ್ಲರೂ ಪ್ರಜಾಪ್ರಭುತ್ವದ ರೀತಿನೀತಿಗಳಿಗನುಸಾರವಾಗಿ ನಡೆದುಕೊಂಡರು.

ಇವರೆಲ್ಲರಲ್ಲಿ ಜಾತಿ ಕುಲ, ಗೋತ್ರಗಳ ಭೇದವಿಲ್ಲ. ಯಜ್ಞ, ಯಾಗ, ನರಬಲಿ, ಪಶುಬಲಿಗಳಿಲ್ಲ, ಕರ್ಮ ಪರಂಪರೆಯ ವೈದಿಕ ಆಚಾರಗಳಿಲ್ಲ ಪೌರೋಹಿತ್ಯದ ಗೊಂದಲವಿಲ್ಲ. ಸ್ತ್ರೀ ಪುರುಷ ಅಸಮಾನತೆಯಿಲ್ಲ. ಕನಿಷ್ಟರೂ ಇಲ್ಲ ಶ್ರೇಷ್ಟರೂ ಇಲ್ಲ ಎಲ್ಲರೂ ಕುಲಜರೆ. ಅವರ ಮನಒಂದೆ, ನಡೆ ಒಂದೇ, ನುಡಿ ಒಂದೇ, ಜೀವನದ ಪರಮ ಗುರಿ ಒಂದೇ.

ಅಂದು ಕಲ್ಯಾಣದಲ್ಲಿ ಒಳಗೇರಿ ಹೊರಗೇರಿಗಳಿರಲಿಲ್ಲ. ಎಲ್ಲಾ ಕೇರಿಗಳು ಶಿವಶರಣರ ಕೇರಿಗಳೆ! ಕಾಯಕ ಸಂಪನ್ನರ ಬೀದಿಗಳೆ!. ಅಲ್ಲಿ ಹಸಿವೆಂಬುದಿಲ್ಲ. ಹೊಡೆದಾಟವಿಲ್ಲ, ಬಡಿದಾಟವಿಲ್ಲ, ಕದ್ದು ತಿನ್ನುವ ಬುದ್ಧಿಯಿಲ್ಲ, ಕಸಿದು ತಿನ್ನುವ ದುರ್ಗುಣವಿಲ್ಲ, ಭಿಕ್ಷಾಟನೆಯಂತೂ ಮೊದಲೇಯಿಲ್ಲ. ಎಲ್ಲರೂ ಉಂಡುಟ್ಟು ಸುಖದಿಂದ ಬಾಳಿದರು. ಇದು ಬಾಹ್ಯದ ಚಿತ್ರಣವಾದರೆ ಅಂತರಂಗದಲ್ಲಿಯೂ ಅವರು ಅಷ್ಟೆ ಶ್ರೀಮಂತರು. ನಿರ್ಮಲ ಮನಸ್ಸು, ಲಿಂಗ ಮೆಚ್ಚಿದ ನಡೆ-ನುಡಿ, ಬದುಕಿನ ಅಂತಿಮ ಸತ್ಯದ ಅನ್ವೇಷಣೆಯಿಂದ ಇಡೀ ಕಲ್ಯಾಣ ಕೈಲಾಸದಂತೆ ಕಾಣುತ್ತಿತ್ತು.

ಕಲ್ಯಾಣದ ಶಿವಶರಣರ ಮನೆ ಮನೆಗಳೆಲ್ಲ ವಿದ್ಯಾಮಂದಿರಗಳಾಗಿದ್ದವು. ಅಲ್ಲಿ ಕನ್ನಡದ ವಿದ್ಯಾಭ್ಯಾಸ ನಡೆಯುತ್ತಿತ್ತು. ದೇಶದ ಬೇರೆ-ಬೇರೆ ಭಾಗಗಳಿಂದ ಬೇರೆ ಬೇರೆ ಭಾಷೆಯಲ್ಲಿ ಮಾತನಾಡುವ ಜನರು ಕಲ್ಯಾಣಕ್ಕೆ ಬಂದು ಕೆಲವೇ ಕೆಲವು ದಿನಗಳಲ್ಲಿ ಕನ್ನಡವನ್ನು ಕಲಿತು ಕನ್ನಡದಲ್ಲಿಯೇ ಸಾಹಿತ್ಯ ನಿರ್ಮಾಣ ಮಾಡಿದರು. ಇದನ್ನು ನೋಡಿದರೆ ಅಂದು ಕನ್ನಡ ಭಾಷೆ ಇಡೀ ಭಾರತದೇಶದ ಭಾಷೆಯಾಗಿತ್ತೇನೋ ಎಂಬ ಸಂಶಯ ಬರುತ್ತದೆ. ಶರಣರ ತನು ಕನ್ನಡ, ಶರಣರ ಮನ ಕನ್ನಡ, ಶರಣರ ಸಾಹಿತ್ಯ ಕನ್ನಡ, ಶರಣರ ಸಂಗೀತ ಕನ್ನಡ, ಶರಣರ ತಾಳ ಕನ್ನಡ ಶರಣರ ಲಯ ಕನ್ನಡ. ಅವರೆಲ್ಲರ ರಕ್ತದ ಹನಿಹನಿಗಳಲ್ಲಿ ಪ್ರಾಣದಲ್ಲಿ ಕನ್ನಡ ಪ್ರಜ್ವಲಿಸುತ್ತಿತ್ತು. ಕನ್ನಡವನ್ನು ಅಷ್ಟೊಂದು ಪ್ರೀತಿಸಿದರು ಕಲ್ಯಾಣದ ಶರಣರು.

ಮಾನವ ಇತಿಹಾಸದಲ್ಲಿ ಸ್ತ್ರೀಯು ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ. ಆದರೆ ಕಲ್ಯಾಣದ ನೆಲ ಅವಳನ್ನು ಶೋಷಣೆಯಿಂದ ಮುಕ್ತ ಮಾಡಿತು. ಹೆಣ್ಣು ಸ್ವತಂತ್ರಳಾಗಿ ಪುರುಷರ ಹೆಜ್ಜೆಯಲ್ಲಿ ತಮ್ಮ ಹೆಜ್ಜೆಯನ್ನು ನೆಟ್ಟು ತಮ್ಮ ತಾಕತ್ತನ್ನು ತೋರಿಸಿದ್ದು ಕಲ್ಯಾಣದ ನೆಲದಲ್ಲಿ ಮಾತ್ರ. ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ಸಾಹಿತ್ಯ ಕ್ಷೇತ್ರ, ಆಧ್ಯಾತ್ಮಿಕ ಕ್ಷೇತ್ರ ಮುಂತಾದ ಕ್ಷೇತ್ರಗಳಲ್ಲಿ ಸಮಾನತೆಯಿಂದ ದುಡಿದು ಪ್ರಜ್ಞಾ ಪೂರ್ಣ ಶಕ್ತಿಯಾದಳು, ಕಲ್ಯಾಣದ ನಾಗರಿಕತೆಯ ನಿರ್ಮಾಪಕಳಾದಳು. ಒಂದೇ ವೇದಿಕೆಯ ಮೇಲೆ ೩೨ ಜನ ಶಿವಶರಣೆಯರು ವಚನಗಳನ್ನು ರಚಿಸಿದ್ದಾರೆ. ಇಂತಹ ಚಿತ್ರಣ ಜಗತ್ತಿನ ಯಾವ ಭಾಗದಲ್ಲಿಯೂ ಕಂಡು ಬರುವದಿಲ್ಲ.

ಆದರೆ ಇಷ್ಟೆಲ್ಲ ಒಳ್ಳೆಯದು ನಡೆದೂ ಕೆಲವರಿಗೆ ಅದು ಹಿಡಿಸಲಿಲ್ಲ. "ಮಾನವನಿಗೆ ಒಳ್ಳೆಯದನ್ನು ಇಟ್ಟುಕೊಳ್ಳುವ ವಿಶಾಲ ಮನಸು ಇಲ್ಲ" ಎಂಬುದನ್ನು ಸಾಬೀತುಮಾಡಿದರು ಕೆಲವೇ ಕೆಲವು ಜಾತಿವಾದಿ ಜನ. ಶರಣ ಶರಣರ ನಡುವೆ ನಡೆದ ಮದುವೆಯನ್ನು ಅಂತರಜಾತಿ ವಿವಾಹವೆಂದು ಪರಿಗಣಿಸಿ, ಅರಸ ಬಿಜ್ಜಳನ ಕಿವಿಯೂದಿದರು. ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದ ಬಿಜ್ಜಳ ಅಸಮರ್ಥನಾದನು. ಜವಾಬ್ದಾರಿಯಲ್ಲಿರುವ ವ್ಯಕ್ತಿ ದುರ್ಬಲನಾದರೆ ಅಂದರೆ ಒಳ್ಳೆಯದನ್ನು ಹೇಳಲು ಅಸಮರ್ಥನಾದರೆ ಏನಾಗುತ್ತದೆ ಎಂಬುದಕ್ಕೆ ಕಲ್ಯಾಣವೇ ಅಪ್ಪಟ ಸಾಕ್ಷಿಯಾಗಿದೆ. ಬಿಜ್ಜಳ ಯೋಚಿಸಿ ಕೆಲಸ ಮಾಡಿದರೆ ಮನುಕುಲದ ಇತಿಹಾಸವೇ ಬೇರೆಯಾಗಿರುತ್ತಿತ್ತು. ಕಲ್ಯಾಣದ ಚರಿತ್ರೆಯೇ ಅವಿಸ್ಮರಣೀಯವಾಗಿರುತ್ತಿತ್ತು. ಆದರೆ ಬಿಜ್ಜಳ ಸ್ವಾರ್ಥಪರನಾಗಿ ತನ್ನ ಖುರ್ಚಿಗೆ ಆಶೆಮಾಡಿ ಶರಣರ ವ್ಯಕ್ತಿತ್ವದ ಪರಿಚಯವಿದ್ದರು ಶರಣರಿಗೆ ಎಳೆಹೂಟೆ ಶಿಕ್ಷೆ ಕೊಡಲು ಸಿದ್ಧನಾದ.

ಹರಳಯ್ಯ, ಮಧುವರಸ, ಶೀಲವಂತ, ಶರಣರಿಗೆ ಕಲ್ಯಾಣದ ಬೀದಿ ಬೀದಿಯಲ್ಲಿ ಆನೆಯ ಕಾಲಿಗೆಕಟ್ಟಿ ಎಳೆಸಲಾಯಿತು. ಕಲ್ಯಾಣದ ಕ್ರಾಂತಿಯಾಯಿತು. ಬಸವಣ್ಣನವರು ಕಲ್ಯಾಣವನ್ನು ತೊರೆದರು. ಕಲ್ಯಾಣನಗರದಲ್ಲಿ ಹಿಂಸಾಚಾರ ಮುಗಿಲು ಮುಟ್ಟಿತು. ಶರಣರ ಆಶೆ ಆಕಾಂಕ್ಷೆಗಳು, ಅಸಾಧ್ಯ ಸಾಧನಗಳು ಮಣ್ಣುಗೂಡಿದವು. ೩೫ ಕಿ.ಮೀ. ವಿಸ್ತೀರ್ಣತೆಯನ್ನು ಹೊಂದಿ ಸುಮಾರು ೧೦-೧೫ ಲಕ್ಷಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ಕಲ್ಯಾಣವು ನೋಡು ನೋಡುವಷ್ಟರಲ್ಲಿ ಹಾಳಾಯಿತು. ಅನುಭವ ಮಂಟಪ, ಮಹಾಮನೆ ಅನೇಕ ಭವ್ಯವಾದ ದೇಗುಲಗಳು, ದೊಡ್ಡ ದೊಡ್ಡ ವಿದ್ಯಾಕೇಂದ್ರಗಳು, ಶರಣರ ಶಿವಯೋಗನೆಲೆಗಳು, ಸಂಗೀತ ವಿಶ್ವವಿದ್ಯಾಲಯ ಮುಂತಾದವುಗಳು ಮಾನವನ ಕುತಂತ್ರದಿಂದ ಧರೆಗುರುಳಿದವು. ಭವ್ಯವಾದ ಉಜ್ವಲವಾದ ಕಲ್ಯಾಣದ ಇತಿಹಾಸ ಮುಕ್ತಾಯವಾಯಿತು.

ಈ ಜಾತಿವಾದಿಗಳಿಗೆ ಬಸವಾದಿ ಶರಣರ ಮೇಲೆ ಸಿಟ್ಟು ಇತ್ತು ಎನ್ನುವದಕ್ಕಿಂತ ಅನುಭವ ಮಂಟಪ ಮತ್ತು ವಚನ ಸಾಹಿತ್ಯದ ಮೇಲೆ ದ್ವೇಷ ಹೆಚ್ಚಿತ್ತು ಮುಂದಿನ ಪೀಳಿಗೆಗೆ ಅವರು ರಚಿಸಿದ ಸಾಹಿತ್ಯ ದಕ್ಕದಂತೆ ಮಾಡುವ ಉದ್ದೇಶ ಅವರದಾಗಿತ್ತು. ಇಡೀ ಜಗತ್ತಿನ ಉಸಿರೇ ಆಗಿರುವ ವಚನ ಸಾಹಿತ್ಯ ಅನುಭವ ಮಂಟಪದಲ್ಲಿ ಅಡಗಿಕೊಂಡು ಕುಳಿತಿತ್ತು. ಹೀಗಾಗಿ ಅನುಭವ ಮಂಟಪವನ್ನೆ ಕೆಡುವಲು ಅವರು ಯೋಚಿಸಿದರು. ಅಷ್ಟರಲ್ಲಿ ಅಕ್ಕ ನಾಗಮ್ಮ , ಚನ್ನಬಸವಣ್ಣ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಘನಲಿಂಗ ರುದ್ರಮುನಿ, ಮುಂತಾದ ಶಿವಶರಣರು ವಚನ ಸಾಹಿತ್ಯವನ್ನು ಹಾಳು ಮಾಡಲು ಬಿಡಲಿಲ್ಲ. ತಮ್ಮ ಪ್ರಾಣದ ಹಂಗು ದೊರೆದು ಕಲ್ಯಾಣದಿಂದ ವಚನಸಾಹಿತ್ಯ ತೆಗೆದುಕೊಂಡು

ಹೊರನಡೆದರು. ಕಲ್ಯಾಣದ ಸಮೀಪದಲ್ಲಿರುವ ಘೋರವಾಡಿಯಲ್ಲಿ ಶರಣರಿಗೂ ಮತ್ತು ಕಳಚೂರಿ ಸೈನ್ಯಕ್ಕೂ ಯುದ್ಧ ನಡೆಯಿತು. ಈ ಯುದ್ಧ ಮೊದಲನೆ ಯುದ್ಧವಾಗಿದ್ದು ತುಂಬಾ ಘೋರವಾಗಿನಡೆದಿರುವದರಿಂದಲೆ ಆ ಪ್ರದೇಶಕ್ಕೆ ಇಂದಿಗು ಜನರು ಹಾಗೆಯೇ ಕರೆಯುತ್ತಾರೆ. ಆದರೂ ಶರಣರು ಅಂಜದೆ ಅಳಕದೆ ತಮಗೆ ಸಾಧ್ಯವಾದಲ್ಲೆಲ್ಲ ವಚನ ಸಾಹಿತ್ಯವನ್ನು ಮುಚ್ಚಿಟ್ಟರು. ತದನಂತರದಲ್ಲಿ ಬಹಳ ವರ್ಷಗಳ ನಂತರ ಶ್ರೀ ಫ.ಗು. ಹಳಕಟ್ಟಿಯಂತಹ ವಿದ್ವಾಂಸರಿಂದ ಅಳಿದುಳಿದ ವಚನ ಸಾಹಿತ್ಯ ಮುದ್ರಣಗೊಂಡಿದೆ.

ಅನಂತರ ಕಲ್ಯಾಣದ ಕೋಟೆಗಾಗಿ ಅನೇಕ ಅರಸರಲ್ಲಿ ಕಚ್ಚಾಟಗಳು ನಡೆದವು. ಹೊಯ್ಸಳರು, ಯಾದವರು, ಮುಸ್ಲಿಂ ಶಾಹಿ ಮನೆತನಗಳು, ನವಾಬರು ಕಲ್ಯಾಣವನ್ನು ಆಳಿದರು. ೧೯೫೬ರಲ್ಲಿ ಭಾಷೆಗಳ ಆಧಾರದ ಮೇಲೆ ಪ್ರಾಂತಗಳನ್ನು ರಚಿಸಲಾಯಿತು. ಕನ್ನಡ ಭಾಷೆಯ ಗಟ್ಟಿಯನೆಲ ಇದಾಗಿರುವದರಿಂದ ಇದನ್ನು ಕರ್ನಾಟಕದೊಳಗೆ ಸೇರಿಸಲಾಯಿತು. ಸೊಲ್ಲಾಪುರದ ಬಾಬಾಸಾಹೇಬ ವಾರದ ಅವರ ಸತತ ಪ್ರಯತ್ನದಿಂದಾಗಿ ಜಗತ್ತಿಗೆ ಕಲ್ಯಾಣವನ್ನುಂಟುಮಾಡಿದ ಬಸವಣ್ಣನವರ ಹೆಸರಿಟ್ಟು 'ಬಸವಕಲ್ಯಾಣ' ಎಂದು ಕರೆಯಲಾಯಿತು.

**References**


1. Basavakalyan vandu adhyan Author: Dr. Neelambika.
2. 6th Vikramadityan Shashanagalu by: Dr. G.M.Nagayya.
3. Basava Puran By: Dr. R.C.Hiremath.
4. Hariharan Ragalegalu By: Dr.Halakatti.
5. Shivatatwa Chintamani By: S.Basappa.
6. Vachananusheelana By Dr. Vidhyashankar.